ಜೆಎಸ್‌ಎಸ್ ಮಹಾವಿದ್ಯಾಪೀಠ

# ಜೆಎಸ್‌ಎಸ್ ಮಹಿಳಾ ಕಾಲೇಜು

ಮೈಸೂರು ವಿಶ್ವವಿದ್ಯಾನಿಲಯಕ್ಕೆ ಸಂಯೋಜಿತ ಮತ್ತು ನ್ಯಾಕ್ ನಿಂದ 'ಬಿ' ಮಾನ್ಯತೆ ಪಡೆದಿದೆ

**ಕೊಳ್ಳೇಗಾಲ – 571 440, ಚಾಮರಾಜನಗರ ಜಿಲ್ಲೆ**

☎: 08224-252149 🖷: 08224-256051 Email: jsscwk@gmail.com www.jsscwkgl.org

## ಪ್ರಕಟಣೆಯ ಕೃಪೆಗಾಗಿ

**ಜೆಎಸ್‌ಎಸ್ ಮಹಿಳಾ ಕಾಲೇಜಿನ ರಾಷ್ಟ್ರೀಯ ಸೇವಾ ಯೋಜನೆ ವಾರ್ಷಿಕ ವಿಶೇಷ ಶಿಬಿರಕ್ಕೆ ಚಾಲನೆ**

**ರಾಷ್ಟ್ರೀಯ ಸೇವಾ ಯೋಜನೆಯಿಂದ ಪರಿಪೂರ್ಣ ವ್ಯಕ್ತಿತ್ವ ನಿರ್ಮಾಣ ಸಾಧ್ಯ-ರೆವರೆಂಟ್ ಫಾದರ್ ಎಸ್.ಡಿ.ಜೋಸೆಫ್**

ಕೊಳ್ಳೇಗಾಲ: 12.3.19 ಶಿಕ್ಷಣಕ್ಕೆ ಶಕ್ತಿ ಇರುವ ಹಾಗೆ ಅದಕ್ಕೆ ಪೂರಕವಾಗಿ ದೇಶಕಟ್ಟುವ, ದೇಶ ಪ್ರೇಮ ಹೆಚ್ಚಿಸುವ ಪರಿಪೂರ್ಣ ವಿದ್ಯಾರ್ಥಿಗಳನ್ನು ಸೃಷ್ಟಿಸುವ ಶಕ್ತಿ ರಾಷ್ಟ್ರೀಯ ಸೇವಾ ಯೋಜನೆಗೂ ಇದೆ ಎಂದು ಎಸ್.ಡಿ.ಜೋಸೆಫ್, ಸಂಸ್ಥಾಪಕರು, ಸಂತ ಮಾರ್ಗರೇಟ್ ಪದವಿ ಪೂರ್ವ ಕಾಲೇಜು ರವರು ತಿಳಿಸಿದರು.

ಹನೂರು ತಾಲ್ಲೋಕಿನ ಕಾಮಗೆರೆಯಲ್ಲಿ ಕೊಳ್ಳೇಗಾಲದ ಜೆಎಸ್‌ಎಸ್ ಮಹಿಳಾ ಕಾಲೇಜಿನ ರಾಷ್ಟ್ರೀಯ ಸೇವಾ ಯೋಜನೆ ಘಟಕದ ವತಿಯಿಂದ ಆಯೋಜಿಸಿದ್ದ ವಾರ್ಷಿಕ ವಿಶೇಷ ಶಿಬಿರವನ್ನು ಉದ್ಘಾಟಿಸಿ ಮಾತನಾಡಿದರು.

1969 ರಲ್ಲಿ ಗಾಂಧೀಜಿ ಹುಟ್ಟುಹಾಕಿದ ಎನ್‌ಎಸ್‌ಎಸ್ ಒಂದು ರಾಷ್ಟ್ರೀಯ ಚಳುವಳಿ. ಇಲ್ಲಿ ರಾಷ್ಟ್ರಾಭಿಮಾನ, ಭಾವೈಕ್ಯತೆ, ಜಾತ್ಯತೀತತೆ, ಸೇವೆಯ ಪರಿಕಲ್ಪನೆ ಸಮಾನತೆ, ಸಾಮಾಜಿಕ ನ್ಯಾಯ, ಗ್ರಾಮೀಣ ಬದುಕಿನ ಪರಿಚಯ ಸೇರಿದಂತೆ ಹಲವು ಮಜಲುಗಳನ್ನು ಪ್ರಸ್ತುತ ಪಡಿಸುವುದೇ ಇದರ ಉದ್ದೇಶ ಎಂದು ತಿಳಿಸಿದರು.

ಅಧ್ಯಕ್ಷತೆ ವಹಿಸಿ ಮಾತನಾಡಿದ ಪ್ರಾಚಾರ್ಯ ಪ್ರೊ.ಉಮೇಶ ಆರಂಭದಲ್ಲಿ ಕೇವಲ 37 ವಿಶ್ವವಿದ್ಯಾನಿಲಯಗಳಲ್ಲಿದ್ದ ರಾಷ್ಟ್ರೀಯ ಸೇವಾ ಯೋಜನೆ ಇಂದು ದೇಶದ 750 ವಿಶ್ವವಿದ್ಯಾನಿಲಯಗಳಲ್ಲಿ 50 ಲಕ್ಷ, ಕರ್ನಾಟದಕಲ್ಲಿ 5 ಲಕ್ಷ ಸ್ವಯಂ ಸೇವಕರಿದ್ದಾರೆ. ಇದು ಶಿಕ್ಷಣದ ಅಡಿಪಾಯವಾಗಿದೆ. ಶಿಬಿರದಲ್ಲಿ ಅನೇಕ ಗುಣಾತ್ಮಕ, ಕ್ರಿಯಾತ್ಮಕ ಅರಿವು ಕಾರ್ಯಕ್ರಮಗಳನ್ನು ಆಯೋಜಿಸುವುದರಿಂದ ವಿದ್ಯಾರ್ಥಿಗಳಲ್ಲಿ ಮಾನವೀಯ ಮೌಲ್ಯಗಳನ್ನು ಬೆಳಸಬಹುದಾಗಿದೆ ಎಂದು ತಿಳಿಸಿದರು.

ಶ್ರೀ ಎನ್ ನಂಜುಂಡಸ್ವಾಮಿ, ಪ್ರಾಚಾರ್ಯ, ಸಂತ, ಮಾರ್ಗರೇಟ್ ಪದವಿಪೂರ್ವ ಕಾಲೇಜು ರವರು ಮಾತನಾಡಿ ರಾಷ್ಟ್ರೀಯ ಸೇವಾ ಯೋಜನೆ ಎಂದರೆ ಕೆಲಸ, ಕಸ ತೆಗೆಯುವಿಕೆ ಎಂಬ ಭಾವನೆಯನ್ನು ಹೊಂದದೆ, ಇಲ್ಲಿ ನಡೆಯುವ ಪ್ರತಿಯೊಂದು ಕಾರ್ಯಕ್ರಮ, ಶ್ರಮದಾನ ನಿಮ್ಮ ಮನೋಸ್ಥಿತಿಯನ್ನು ಬದಲಾಯಿಸಿ ಗ್ರಾಮೀಣ ಪ್ರದೇಶದ ನೈಜ ಬದುಕನ್ನು ಅರಿಯಲು ಸಹಕಾರಿಯಾಗುತ್ತದೆ ಎಂದು ತಿಳಿಸಿದರು.

ಕಾರ್ಯಕ್ರಮಾಧಿಕಾರಿ ಪ್ರೊ.ಬಸವರಾಜು, ಸಹಾಯಕ ಕಾರ್ಯಕ್ರಮಾಧಿಕಾರಿ ಪ್ರೊ.ಪ್ರಕಾಶ್, ಪ್ರೊ.ಮಂಜುನಾಥ್ ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಎಸ್.ಡಿ.ಜೋಸೆಫ್‌ರವರು ಉದ್ಘಾಟನಾ ಭಾಷಣ ಮಾಡುತ್ತಿರುವುದು. ಚಿತ್ರದಲ್ಲಿ ಪ್ರೊ.ಮಂಜುನಾಥ, ಎನ್ ನಂಜುಂಡಸ್ವಾಮಿ, ಪ್ರಾಚಾರ್ಯ ಪ್ರೊ.ಉಮೇಶ, ಪ್ರೊ.ಬಸವರಾಜು ಮತ್ತು ಪ್ರೊ.ಪ್ರಕಾಶ್‌ರವರನ್ನು ಕಾಣಬಹುದು.




ಪ್ರಾಚಾರ್ಯ ಪ್ರೊ.ಉಮೇಶ ಶಿಬಿರಾರ್ಥಿಗಳನ್ನು ಕುರಿತು ಮಾತನಾಡುತ್ತಿರುವುದು. ಚಿತ್ರದಲ್ಲಿ ಪ್ರೊ.ಮಂಜುನಾಥ, ಎನ್ ನಂಜುಂಡಸ್ವಾಮಿ, ಎಸ್.ಡಿ.ಜೋಸೆಫ್, ಪ್ರೊ.ಬಸವರಾಜು ಮತ್ತು ಪ್ರೊ.ಪ್ರಕಾಶ್‌ರವರನ್ನು ಕಾಣಬಹುದು.




ಶಿಬಿರದಲ್ಲಿ ಭಾಗವಹಿಸಿರುವ ಸ್ವಯಂ ಸೇವಕಿಯರು

